ದಿಃ 30.06.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಹೊಳಲ್ಕೆರೆ.

ಸಿ ಸಿ ನಂಃ 1646/2024

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ಜಯಾನಾಯ್ಕ | | ಪಿ.ಡಬ್ಲ್ಯೂ | : 2 |
| ತಂದೆಯ ಹೆಸರು | : ಲಚ್ಚಾ ನಾಯ್ಕ | | ಸಿ.ಡಬ್ಲ್ಯೂ. | : 2 |
| ವಯಸ್ಸು | : 45 ವರ್ಷ | | ದಿನಾಂಕ | :30.06.2025 |
| ಉದ್ಯೋಗ | : ವ್ಯವಸಾಯ | | | |
| ವಾಸಸ್ಥಳ | : ಬೊಮ್ಮನಕಟ್ಟೆ ಗ್ರಾಮ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತಿಲ್ಲ, ಚಾಸಾ–**1** ನನ್ನ ಗ್ರಾಮದವರು. ಚಾಸಾ–**3** ರಿಂದ **6** ನನಗೆ ಗೊತ್ತಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**04.04.2024** ರಂದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಸದರಿ ನೋಟೀಸ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**7** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**7(**ಎ**)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು **01** ವರ್ಷಗಳ ಹಿಂದೆ ತಾಲ್ಲೂಕು ಕಛೇರಿಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ. ನಿಪಿ–**1** ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**04.04.2024** ರಂದು ಶೋಧನಾ ಸಮುಚಿತ ವಾರೆಂಟ್ ಆಗಿದ್ದು, ಸದರಿ ವಾರೆಂಟ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ–**2** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**2(**ಬಿ**)** ಎಂದು ಗುರುತಿಸಲಾಯಿತು.

ದಿಃ 30.06.2025

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**04.04.2024** ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಸ್ವತ್ತಿನ ಪಟ್ಟಿಯಾಗಿದ್ದು**,** ಸದರಿ ಸ್ವತ್ತಿನ ಪಟ್ಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು**,** ಸದರಿ ದಾಖಲೆಯನ್ನು ಈಗಾಗಲೇ ನಿಪಿ**–3** ಎಂದು ಗುರುತಿಸಿದ್ದು**,** ಸಾಕ್ಷಿಯ ಸಹಿಯನ್ನು ನಿಪಿ**–3**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು**,** ಸದರಿ ದಾಖಲೆಯು ದಿಃ**04.04.2024** ರಂದು ಈ ಪ್ರಕರಣದಲ್ಲಿ ತಯಾರಿಸಿದ ಮಾದರಿ ಮೊಹರಿನ ನಕಲಾಗಿದ್ದು**,** ಸದರಿ ಮಾದರಿ ಮೊಹರಿನ ನಕಲನ್ನು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು**,** ಸದರಿ ದಾಖಲೆಯನ್ನು ಈಗಾಗಲೇ ನಿಪಿ**–4** ಎಂದು ಗುರುತಿಸಿದ್ದು**,** ಸಾಕ್ಷಿಯ ಸಹಿಯನ್ನು ನಿಪಿ**–4**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು**,** ಸದರಿ ದಾಖಲೆಯು ಈ ಪ್ರಕರಣದಲ್ಲಿ ದಿಃ**04.04.2024** ರಂದು ಮಾಡಿದ ಸ್ಥಳ ಪಂಚನಾಮೆಯಾಗಿದ್ದು**,** ಸದರಿ ಸ್ಥಳ ಪಂಚನಾಮೆಯನ್ನು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು**,** ಸದರಿ ದಾಖಲೆಯನ್ನು ಈಗಾಗಲೇ ನಿಪಿ**–5** ಎಂದು ಗುರುತಿಸಿದ್ದು**,** ಸಾಕ್ಷಿಯ ಸಹಿಯನ್ನು ನಿಪಿ**–5**(ಬಿ) ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ವಸ್ತುಗಳ ಮೇಲೆ ಅಂಟಿಸಿರುವ ಪಂಚರ ಸಹಿಯುಳ್ಳ ಮಾದರಿ ಚೀಟಿಯನ್ನು ತೋರಿಸಿದ್ದು, ಸದರಿ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮುದ್ದೆ ಮಾಲಿನ ವಸ್ತುಗಳನ್ನು ಈಗಾಗಲೇ ಎಂ.ಓ.1 ಎಂದು ಗುರುತಿಸಲಾಗಿದ್ದು, ಸದರಿ ಎಂ.ಓ.1 ರ ಮೇಲಿ ಅಂಟಿಸಿರುವ ಸಾಕ್ಷಿಯ ಸಹಿಯುಳ್ಳ ಚೀಟಿಯನ್ನು ಎಂ.ಓ.1(ಬಿ) ಎಂದು ಗುರುತಿಸಲಾಯಿತು.

ನಿಪಿ–2 ರಿಂದ 5 ಮತ್ತು 7 ಮತ್ತು ಎಂ.ಓ.1 ರ ಮೇಲಿನ ಸಹಿಯನ್ನು ಈಗ್ಗೆ ಸುಮಾರು 01 ವರ್ಷಗಳ ಹಿಂದೆ ಹೊಳಲ್ಕೆರೆ ತಾಲ್ಲೂಕು ಕಛೇರಿಯ ಹತ್ತಿರ ಅಬಕಾರಿ ಪೊಲೀಸ್ ನವರು ಸದರಿ ಸಹಿಗಳನ್ನು ಪಡೆದಿರುತ್ತಾರೆ. ನಾನು ನಿಪಿ–5 ಕ್ಕೆ ಸಹಿ ಮಾಡುವಾಗ ಬೇರೆ ಯಾರು ನನ್ನ ಸಮಕ್ಷಮ ಸಹಿ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ

ದಿ: 30.06.2025

ವಸ್ತುಗಳನ್ನು ಮತ್ತು ಮಧ್ಯವನ್ನು ವಶಪಡಿಸಿಕೊಂಡಿಲ್ಲ. ನಿಪಿ.1 ರಿಂದ 5 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಮತ್ತು ಪೊಲೀಸರು ನನಗೆ ಓದಿ ಹೇಳಿಲ್ಲ ಮತ್ತು ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

## <u>ಪಾಟೀ ಸವಾಲು: ಮಾನ್ಯ ಸ.ಸ.ಅ ರವರಿಂದ:</u>

ದಿ:04.04.2024 ರಂದು ನನ್ನನ್ನು ಮತ್ತು ಚಾಸಾ–1 ರವರನ್ನು ಚಾಸಾ–6 ರವರು ಕರೆದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯು ತನ್ನ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮಧ್ಯ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಪಂಚನಾಮೆ ಕ್ರಮ ಜರುಗಿಸಲು ಪಂಚರಾಗಿ ಸಹಕರಿಸಬೇಕೆಂದು ನಮಗೆ ಕೋರಿಕೊಂಡಿದ್ದು, ನಾವುಗಳು ಒಪ್ಪಿರುತ್ತೇವೆಂದರೆ ಸರಿಯಲ್ಲ. ತದನಂತರ ನಾವು, ಅಬಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳು ರಸ್ತೆಗಾವಲು ನಡೆಸುತ್ತಿರುವಾಗ ಒಬ್ಬ ಆಸಾಮಿಯು ಒಂದು ದ್ವಿಚಕ್ರ ವಾಹನದಲ್ಲಿ ಬರುವುದು ಕಂಡು ಬಂದಿದ್ದು ಆತನನ್ನು ತಡೆದು ನಿಲ್ಲಿಸಿದಾಗ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಗೋಣಿ ಚೀಲವನ್ನು ಇಟ್ಟುಕೊಂಡಿರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ಅನುಮಾನಗೊಂಡ ಅಧಿಲಾರಿಗಳು ಆಸಾಮಿಯನ್ನು ವಿಚಾರಿಸಲಾಗಿ ತನ್ನ ಹೆಸರು ಕರಿಯಪ್ಪ ತಂದೆ ಲೇಟ್ ತಿಪ್ಪೇಸ್ವಾಮಿ ಬೊಮ್ಮನಕಟ್ಟೆ ಗ್ರಾಮ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಬಾತ್ಮಿ ಬಂದ ವ್ಯಕ್ತಿ ಅವನೇ ಎಂದು ದೃಡಪಡಿಸಿಕೊಂಡ ನಂತರ ಚೀಲದಲ್ಲಿ ಏನಿದೆ ಎಂದು ಕೇಳಲಾಗಿ ಮಧ್ಯದ ಟೇಟ್ರಾ ಪ್ಯಾಕೆಟ್ ಗಳು ಎಂದು ಆತ ತಿಳಿಸಿದನು ಎಂದರೆ ಸರಿಯಲ್ಲ. ಸದರಿ ದ್ವಿಚಕ್ರ ಮತ್ತು ಗೋಣಿ ಚೀಲವನ್ನು ನಮ್ಮ ಸಮಕ್ಷಮ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ನಮ್ಮ ಸಹಿಯನ್ನು ಪಡೆದು ನಂತರ ಪರಸ್ಪರ ನಮ್ಮಗಳ ಸಮಕ್ಷಮ ಅಂಗ ಶೋಧನೆ ಮಾಡಿಕೊಂಡು ಆರೋಪಿಯ ಚೀಲವನ್ನು ಕೆಳಗೆ ಸುರಿದು ಪರಿಶೀಲಿಸಿದಾಗ ಕಪ್ಪು ಬಣ್ಣದ ಹಿರೋ ಸ್ಪೆಲೆಂಡರ್ ಪ್ಲಸ್ ವಾಹನ ನಂ.ಕೆಎ–16–ಇಡಬ್ಲ್ಯೂ–2097 ಆಗಿತ್ತು ಎಂದರೆ ಸರಿಯಲ್ಲ. ನಂತರ ಗೋಣಿ ಚೀಲವನ್ನು ತೆಗೆದು ನೋಡಲಾಗಿ ಮಧ್ಯ ತುಂಬಿದ ಟೇಟ್ರಾ ಪ್ಯಾಕೆಟ್ ಗಳು ಕಂಡು ಬಂದಿದ್ದು, ಅವುಗಳನ್ನು ಎಣಿಕೆ ಮಾಡಿ ನೋಡಲಾಗಿ ರಾಜಾ ವಿಸ್ಕಿಯ 90 ಮಿಲಿಯ 576 ಟೇಟ್ರಾ ಪ್ಯಾಕೆಟ್ ಗಳು ಇರುವುದು

ದಿ: 30.06.2025

ಕಂಡು ಬಂದಿತ್ತು ಎಂದರೆ ಸರಿಯಲ್ಲ. ಎಲ್ಲಾ ಟೇಟ್ರಾ ಪ್ಯಾಕೆಟ್ ಗಳು ಒಟ್ಟು 51.848 ಲೀಟರ್ ಇದ್ದವು ಎಂದರೆ ಸರಿಯಲ್ಲ. ನಂತರ ಅಧಿಕಾರಿಗಳ ಆತನನ್ನು ವಿಚಾರಿಸಲಾಗಿ ಆತನ ಬಳಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆಂದರೆ ಸರಿಯಲ್ಲ. ನಂತರ ವಶಪಡಿಸಿಕೊಂಡ ಟೇಟ್ರಾ ಪ್ಯಾಕೆಟ್ ಗಳನ್ನು ಮಾದರಿಗಾಗಿ ತೆಗೆದು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಿ ಇಲಾಖೆಯ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾದರಿ ಮೊಹರಿನ ನಕಲು ಮತ್ತು ಮಾದರಿ ಚೀಟಿಗಳನ್ನು ತಯಾರಿಸಿ ನಮ್ಮ ಸಹಿಗಳನ್ನು ಪಡೆದು ಸದರಿ ವಸ್ತುಗಳ ಮೇಲೆ ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮುದ್ದೆ ಮಾಲುಗಳನ್ನು ಇಲಾಖೆಯ ವಶಕ್ಕೆ ಪಡೆದು ಆರೋಪಿಯನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿ:16.08.2024 ರಂದು ಈ ಮೇಲೆ ಹೇಳಿದಂತೆ ಅಬಕಾರಿ ಪೊಲೀಸರ ಮುಂದೆ ನಿಪಿ–8 ರಂತೆ ಮೇಲೆ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದಿರುವ ಒಟ್ಟು ಮಧ್ಯದ ಪೌಚ್ ಗಳನ್ನು ನನ್ನ ಮತ್ತು ಚಾಸಾ–1 ರವರ ಸಮಕ್ಷಮ ನಿಪಿ–5 ರಂತೆ ಮಹಜರ್ ನಂತೆ ಸದರಿ ಸ್ಥಳದಲ್ಲಿ ರಾಸಾಯನಿಕ ಪರೀಕ್ಷೆಗಾಗಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರವಾಗಿ : ಇರುವುದಿಲ್ಲ</u>

ಮರು ವಿಚಾರಣೆ :ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.